**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC.177/2019**

| | | |
|---|---|---|
| ಸಾಕ್ಷಿದಾರರ ಹೆಸರು | : | ನಾಗರಾಜ |
| ತಂದೆಯ ಹೆಸರು | : | ದ್ಯೇಯಪ್ಪ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಕೂಲಿ ಕೆಲಸ, ಕೃಷಿ ಇಲಾಖೆ |
| ವಾಸ ಸ್ಥಳ | : | ಕಾಡಜ್ಜಿ ಗ್ರಾಮ |

ಪಿ.ಡಬ್ಲ್ಯೂ 4

ಸಿ.ಡಬ್ಲ್ಯೂ 3

ದಿ: 03-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ಈಗ ನನಗೆ ತೋರಿಸಿದ ನಿಪಿ-3 ರಲ್ಲಿ ನನ್ನ ಸಹಿಯನ್ನು ನಿಪಿ-3(ಬಿ) ಅಂತ ಗುರುತಿಸುತ್ತೇನೆ. ನಿಪಿ-3 ಕ್ಕೆ ನಾನು 09 ವರ್ಷಗಳ ಹಿಂದೆ ಕಾಡಜ್ಜಿ ಗ್ರಾಮದ ರಾಮಪ್ಪ, ಮಂಜಪ್ಪರವರ ಮನೆಯ ಮುಂದೆ ಸಹಿ ಮಾಡಿದ್ದೇನೆ. ನಿಪಿ-3 ಕ್ಕೆ ನನ್ನೊಂದಿಗೆ ಚಾಸಾ-2, 6 ರವರು ಸಹ ಸಹಿ ಮಾಡಿರುತ್ತಾರೆ. ಪೊಲೀಸರು ಸ್ಥಳಕ್ಕೆ ಬಂದು ಬೆಳಿಗ್ಗೆ 10.00 ರಿಂದ 11.00 ಗಂಟೆ ಅವಧಿಯಲ್ಲಿ ಮಹಜರ ಮಾಡಿದರು. ಆ ಜಾಗವನ್ನು ಚಾಸಾ-6 ರವರು ಪೊಲೀಸರಿಗೆ ಮಹಜರ ಮಾಡಲು ತೋರಿಸಿದರು. ರಾಮಪ್ಪರವರು ಔಷಧಿ ಕುಡಿದು ತೀರಿಕೊಂಡರು ಅದರ ಬಗ್ಗೆ ಮಹಜರ ಮಾಡಿದರು. ಮಹಜರ ಮಾಡುವ 02-03 ದಿವಸಗಳ ಹಿಂದೆ ಮಂಜಪ್ಪ ಮತ್ತು ಅವರ ಅಮ್ಮ ಮೃತ ರಾಮಪ್ಪರವರ ನಡುವೆ ಜಗಳ ಆಗಿತ್ತು, ಆ ವಿಷಯದ ಸಂಬಂಧ ಮಹಜರ ಮಾಡಲು ಬಂದಿದ್ದರು. ಮಹಜರ ಮಾಡುವ ಪೂರ್ವದಲ್ಲಿ

ಪೊಲೀಸರು ನನಗೆ ನೋಟಿಸ್ಸು ಕೊಟ್ಟಿದ್ದರು. ಅದನ್ನು ಈಗ ನೋಡಿ ಅದರಲ್ಲಿರುವ ನನ್ನ ಸಹಿ ಗುರುತಸುತ್ತೇನೆ. ನೋಟಿಸ್ಸನ್ನು ನಿಪಿ-5 ಅಂತ, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಅಂತ ಗುರುತಿಸಲಾಯಿತು.

**<u>ಪಾಟೀ ಸವಾಲುಃ ಶ್ರೀಮತಿ ಕೆ.ಎನ್.ಯು., ವಕೀಲರಿಂದ ಆರೋಪಿತರ ಪರವಾಗಿ</u>**:

2. ನಾನು ಹುಟ್ಟಿದಾಗಿನಿಂದ ಕಾಡಜ್ಜಿ ಗ್ರಾಮದಲ್ಲಿ ವಾಸವಿದ್ದೇನೆ. ಮೃತ ರಾಮಪ್ಪರವರ ಮನೆ ಮತ್ತು ನಮ್ಮ ಮನೆ ನಡುಗೆ 50 ಅಡಿ ಅಂತರ ಇರುತ್ತದೆ. ನಾನು ಬೆಳಿಗ್ಗೆ 10.00 ಗಂಟೆಗೆ ಕೆಲಸಕ್ಕೆ ಹೋದರೆ ಸಂಜೆ 5.00 ಗಂಟೆಗೆ ಬರುತ್ತೇನೆ. ಮೃತ ರಾಮಪ್ಪರವರು ಹೆಂಡತಿಯ ಜೊತೆ ಜಗಳ ಮಾಡಿ ಶಡ್ ನಲ್ಲಿ ವಾಸವಿದ್ದರು ಅಂದರೆ ನನಗೆ ಗೊತ್ತಿಲ್ಲ. ನಿಪಿ-3 ರಲ್ಲಿ ಏನು ಬರೆದಿದೆ ಅಂತ ನನಗೆ ಗೊತ್ತಿಲ್ಲ. ಪೊಲೀಸರು ಸಹಿ ಮಾಡಲು ಹೇಳಿದರೆ ಸಹಿ ಮಾಡಿದ್ದೇನೆ ಅಂದರೆ ನಿಜ. ಚಾಸಾ-2 ಮತ್ತು ಚಾಸಾ-6 ರವರು ನನಗೆ ಪರಿಚಯಸ್ಥರು ಅಂದರೆ ನಿಜ. ಮೃತ ಕುಟುಂಬದವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ-5 ಕ್ಕೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಅಂದರೆ ಸರಿಯಲ್ಲ ಕಾಡಜ್ಜಿಯಲ್ಲಿ ಸಹಿ ಮಾಡಿದ್ದೇನೆ.

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.